ಕೇಳಿದಳು. ಇನ್ನೂ ಜಗತ್ತು ಕಂಡರಿಯದ ಹಸುಳೆ. ಎಳೆಗರುವಿನ ಚಹರೆ. ನನ್ನ ಹೂವಿನದೇ ಪಡಿಯಚ್ಚು!

'ಹೌದು, ಬೇಬಿ ಇದೊಂದು ಥರದ ನಾಟಕವೇ ನೋಡು ಹೇಗೆ ಮಲಗಿದ್ದಾಳೆ ಹೂವಿನ ಥರ ಇದ್ದಾಳಲ್ಲವಾ?' ಹಿಮಾದ್ರಿ ಸತ್ಪತಿ ಕಣ್ಣೊರೆಸಿಕೊಂಡು ಹೇಳಿದ.

ಹೂವಿನ ಥರವೇನು, ಇವಳು ನನ್ನ ಹೂವೇ ತಾನೇ?!

ನನಗೆ ನಾನೇ ಎಚ್ಚರ ತಾಳಿ, ಕಣ್ಣುಗಳಲ್ಲಿದ್ದ ಪಸೆಯಾಚೆಗೂ ಮನಸ್ಸುಂಟಾಗಿಸಿಕೊಂಡು ಮುಂದಿನ 'ಸಂಸ್ಕಾರ'ಕ್ಕೆ ಅಣಿಯಾದೆ. ಮುಂದಿನದಷ್ಟೂ ದೃಶ್ಯಗಳಲ್ಲಿ ಬರೇ ಜನ ಜನ ಜನರಿದ್ದರು. ಜನವೇ ಮರುಳೆನ್ನುವಷ್ಟು ಜನ! ಅಂತಿಂತಲ್ಲದ ಜಾತ್ರೆ!!

ಚಾನಲುಗಳು ಸಂಜೆಯವರೆಗಿನ ದೃಶ್ಯಗಳನ್ನು ಸುತ್ತಿ ಸುತ್ತಿ ಬಿತ್ತರಿಸಿದವು!

ಇಳಿಸಂಜೆಯ ಸುಮಾರಿಗೆ ನನ್ನ ನಿರ್ದೇಶನದಲ್ಲಿ ಹಿಮಾದ್ರಿ ಸತ್ಪತಿ ಮಡದಿಯ ಮೈಗೆ ಅಗ್ನಿಸ್ಪರ್ಶ ಮಾಡಿದ. ಅವನು ತನ್ನ ಕಾಶ್ಯಪಿಯನ್ನು ಕಳಿಸಿಕೊಟ್ಟರೆ, ನಾನು ನನ್ನ ಹೂವಿಗೆ ಮೌನದ ವಿದಾಯ ಹೇಳಿದೆ.

'ಓ ಎಲ್ಲವನ್ನೂ ಹೊಂದಿರುವ ಅಗ್ನಿಯೇ... ಇನ್ನು ಮುಂದಿನ ಬದುಕಿನ ಸನ್ನಾಹವಾಗಲಿ. ಈ ವ್ಯಕ್ತಿಯನ್ನು ಅದರ ಪಿತೃಗಳಿಗೆ ಕೊಂಡೊಯ್ಯಿ. ಆ ಬಳಿಕ ದೇವರುಗಳ ಇಚ್ಛೆಯಿದ್ದಂತೆ ಆಗಲಿ' ಋಗ್ವೇದವನ್ನು ಪಠಿಸಿದೆ.

## 10

ಎಂಟೂವರೆಗೆ ಹೊಟೆಲಿನ ಲಾಬಿಗೆ ಇಳಿದುಬರುವ ಹೊತ್ತಿಗೆ ಹಿಮಾಂಶು ಸತ್ಪತಿ ನನ್ನನ್ನೇ ಎದುರು ನೋಡಿಕೊಂಡು ಕಾದಿದ್ದ. ಬದಿಯಲ್ಲಿ ಕುಣಾಲ ಮೊಹಂತಿಯಿದ್ದ. ಇಬ್ಬರಿಗೂ ಗ್ರೀಟ್ ಮಾಡಿದೆ. ಕುಣಾಲ ಮೊಹಂತಿ ಒಂದೆರಡು ಮಿನಿಟು ಒಡನಿದ್ದು, ನಮ್ಮಿಬ್ಬರ ಮಾತಿಗೆ ಎಡೆಮಾಡಿಕೊಡುವ ಹಾಗೆ ಹೊರಗೆ ಕಾಯುವುದಾಗಿ ಹೇಳಿ ಹೊರಹೋದ. ನಾನು ಮತ್ತು ಕಾಶ್ಯಪಿಯ ಪತಿ ಹೊಟೆಲಿನ ದೊಡ್ಡ ಹಜಾರದಲ್ಲೊಂದು ಗೋಡೆಬದಿಯ ಸೋಫಾದಲ್ಲಿ ಎದುರುಬದುರಾಗಿ ಕೂತೆವು.

ಸುಮಾರು ಮಿನಿಟುಗಳಷ್ಟು ಮೀನಮೇಷ ಮಾಡಿದ ಮಾತು, ದುಃಖದ ನಡುವೆಯೇ ಹುಟ್ಟಿತು.

'ಐ ಆಮ್ ಸೋ ಸ್ಸಾರಿ, ಮಿಸ್ಟರ್ ಹಿಮಾದ್ರಿ...' ನಾನೇ ಮಾತಿಗಿಳಿದೆ. ಮನಸ್ಸು ಅಳುಕಿಕೊಂಡೇ ಮಿಕ್ಕಿತು.

'ಓಹ್ ನೋ... ನಿಮಗೂ ನಾನು ಕಂಡೊಲೆನ್ಸ್ ಹೇಳುತೀನಿ... ಅವಳು ನನಗೆ ಕಾಶ್ಯಪಿ. ಅದಕ್ಕೆ ಮೊದಲು ನಿಮಗೆ ಹೂವು!'

'.....??!'

'ಕೋವಲನ್... ಕಮ್ಮಾನ್. ನನಗೆ ಎಲ್ಲ ವಿಷಯ ಗೊತ್ತು. ಎಲ್ಲವನ್ನೂ ಅವಳೇ ಹೇಳಿದ್ದಳು... ಬಹುಶಃ ಹೀಗೊಂದು ಸಾವುಂಟಾಗುತ್ತೆ ಅಂತಾನೂ ಅವಳಿಗೆ ಗೊತ್ತಿತ್ತು... ಎರಡು ಮೂರು ತಿಂಗಳಿಂದ ತನ್ನ ಶವಕ್ಕೆ ನೀವೇ ಆಗಿಬರಬೇಕು ಅನ್ನೋದನ್ನೂ ಹೇಳುತಿದ್ದಳು...'

ಕಣ್ಣುಗಳು ನನ್ನ ಹತೋಟಿ ಮೀರಿ ಅತ್ತವು.

ಹಿಮಾದ್ರಿ ಸತ್ಪತಿ ಕಾಶ್ಯಪಿಯ ಬಗ್ಗೆ, ದಾಂಪತ್ಯದ ಬಗ್ಗೆ ಮೆಲುಕಿ ಮೊಗೆದು ಹೇಳಿದ. ನೂರಾರು ಸಂಗತಿಯನ್ನು ಐತಿಹ್ಯವೆಂಬಂತೆ ಕಥಿಸಿದ. ಚರ್ಚಿಸಿದ. ತನಗೆ ಮಂದಿ ಹೇಳುತ್ತಿರುವ ಸಂತಾಪವನ್ನೆಲ್ಲ ನನಗೂ ಹೇಳಿದ. ಗದ್ಗದಿಸಿದ. ಅತ್ತ. ನಾನೂ ಅಷ್ಟೆ ಡಿಟ್ಟೋ ಡಿಟ್ಟೋ... ಅವವನ್ನೇ ಮಾಡಿದೆ.

'ಮುಂದಿನ ಕೆಲಸಕ್ಕೂ ನೀವು ಭಾಗಿಯಾಗಬೇಕು, ಕೋವಲನ್... ಕಾಶ್ಯಪಿಯ ಅಪರಕರ್ಮಗಳನ್ನೂ ನೀವೇ ನಿರ್ದೇಶಿಸಬೇಕು. ಮುಂದಾಳತ್ವ ವಹಿಸಬೇಕು...'